# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಸಂಖ್ಯೆ :ಬೆಂಅಪ್ರಾ/ನಮ/ಅಸ/ಅಅ-3/ತಾಸ-2/ದ/12/2024-25
No.

ದಿನಾಂಕ : 25.11.2024
Date :

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ : 4.1)
**ನಕ್ಷೆ ಮಂಜೂರಾತಿ ಪತ್ರ**

ಶ್ರೀಮತಿ/ಶ್ರೀ,

ಶ್ರೀ ಸತೀಶ್ ರೆಡ್ಡಿ, ಶ್ರೀ ಆನಂದ್ ಕುಮಾರ್ ಹಾಗೂ ಶ್ರೀ ಭರತ್ ಕುಮಾರ್,
ನಂ. 123, ಬೇಗೂರು ರಸ್ತೆ, ಹೊಂಗಸಂದ್ರ,
ಬೆಂಗಳೂರು ದಕ್ಷಿಣ, ಬೆಂಗಳೂರು 560068.

ಮಾನ್ಯರೆ,

ವಿಷಯ : ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.159/1, 159/2, 161, 162, 163/1, 163/2, 178/1, 178/3, 178/4 ರಲ್ಲಿನ ಒಟ್ಟು 10ಎ-11ಗುಂ ಪೈಕಿ 0ಎ-4.75ಗುಂ ಕಾಲುವೆ ಪಥ ಬದಲಾವಣೆಯಿಂದ ಹೆಚ್ಚುವರಿಯಾದ ಖರಾಬು ಹೊರತುಪಡಿಸಿ, ಉಳಿಕೆ 10ಎ-6.25ಗುಂ ವಿಸ್ತೀರ್ಣದ ಪ್ರದೇಶದಲ್ಲಿ ಸರ್ವಸಮ 2 ತಳಮಹಡಿ ಒಳಗೊಂಡ ಬ್ಲಾಕ್-1 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 112 ವಸತಿ ಘಟಕಗಳು, ಬ್ಲಾಕ್-2 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 64 ವಸತಿ ಘಟಕಗಳು, ಬ್ಲಾಕ್-3 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 144 ವಸತಿ ಘಟಕಗಳು, ಬ್ಲಾಕ್-4 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು, ಬ್ಲಾಕ್-5 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 120 ವಸತಿ ಘಟಕಗಳು ಹಾಗೂ ಇಡಬ್ಲ್ಯೂಎಸ್ ಬ್ಲಾಕ್ ರಲ್ಲಿ ತಳ+ನೆಲ+07 ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು ಒಟ್ಟಾರೆ 616 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳ ನಕ್ಷೆಗೆ ಮಂಜೂರಾತಿ ನೀಡುವ ಕುರಿತು.

ಉಲ್ಲೇಖ : ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: 3787, ದಿನಾಂಕ: 04.11.2024.

******

ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.159/1, 159/2, 161, 162, 163/1, 163/2, 178/1, 178/3, 178/4 ರಲ್ಲಿನ ಒಟ್ಟು 10ಎ-11ಗುಂ ಪೈಕಿ 0ಎ-4.75ಗುಂ ಕಾಲುವೆ ಪಥ ಬದಲಾವಣೆಯಿಂದ ಹೆಚ್ಚುವರಿಯಾದ ಖರಾಬು ಹೊರತುಪಡಿಸಿ, ಉಳಿಕೆ 10ಎ-6.25ಗುಂ ವಿಸ್ತೀರ್ಣದ ಪ್ರದೇಶದಲ್ಲಿ ಸರ್ವಸಮ 2 ತಳಮಹಡಿ ಒಳಗೊಂಡ ಬ್ಲಾಕ್-1 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 112 ವಸತಿ ಘಟಕಗಳು, ಬ್ಲಾಕ್-2 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 64 ವಸತಿ ಘಟಕಗಳು, ಬ್ಲಾಕ್-3 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 144 ವಸತಿ ಘಟಕಗಳು, ಬ್ಲಾಕ್-4 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು, ಬ್ಲಾಕ್-5 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 120 ವಸತಿ ಘಟಕಗಳು ಹಾಗೂ ಇಡಬ್ಲ್ಯೂಎಸ್ ಬ್ಲಾಕ್ ರಲ್ಲಿ ತಳ+ನೆಲ+07 ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು ಒಟ್ಟಾರೆ 616 ವಸತಿ ಘಟಕಗಳ ಬಹುಮಹಡಿ ವಸತಿ ಕಟ್ಟಡಗಳ ನಕ್ಷೆಗೆ ಮಂಜೂರಾತಿ ನೀಡುವಂತೆ ಕೋರಿರುತ್ತೀರಿ.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು



ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020. ದೂರವಾಣಿ : 080-23443075, 23445005
T. Chowdaiah Road, Kumarapark West, Bangalore - 560 020, Telephone : 080 - 23443075, 23445005

P.L.O No. 16788

ಅದರನ್ವಯ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ **ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ: 3787, ದಿನಾಂಕ: 04.11.2024** ರಂದು ಸದರಿ ಬಹುಮಹಡಿ ವಸತಿ ಕಟ್ಟಡಗಳ ನಕ್ಷೆ ಮಂಜೂರಾತಿಗೆ ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ ತಾವು ನಕ್ಷೆ ಮಂಜೂರಾತಿ ಶುಲ್ಕಗಳ ಮೊತ್ತವಾದ **ರೂ. 3,24,67,700/- (ಮೂರು ಕೋಟಿ ಇಪ್ಪತ್ನಾಲ್ಕು ಲಕ್ಷ ಅರವತ್ತೇಳು ಸಾವಿರದ ಏಳು ನೂರು ರೂಪಾಯಿಗಳು ಮಾತ್ರ)** ಗಳನ್ನು ಪ್ರಾಧಿಕಾರದ ಆವರಣದಲ್ಲಿರುವ ಕೆನರಾ ಬ್ಯಾಂಕ್ **ಚಲನ್ ಸಂಖ್ಯೆ: GN24116424, ದಿನಾಂಕ: 16.11.2024** ರಂದು ಪ್ರಾಧಿಕಾರಕ್ಕೆ ಪಾವತಿಸಿರುತ್ತೀರಿ.

ಆದುದರಿಂದ, **ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.159/1, 159/2, 161, 162, 163/1, 163/2, 178/1, 178/3, 178/4 ರಲ್ಲಿನ ಒಟ್ಟು 10ಎ-11ಗುಂ ಪೈಕಿ 0ಎ-4.75ಗುಂ ಕಾಲುವೆ ಪಥ ಬದಲಾವಣೆಯಿಂದ ಹೆಚ್ಚುವರಿಯಾದ ಖರಾಬು ಹೊರತುಪಡಿಸಿ, ಉಳಿಕೆ 10ಎ-6.25ಗುಂ ವಿಸ್ತೀರ್ಣದ ಪ್ರದೇಶದಲ್ಲಿ ಸರ್ವಸಮ 2 ತಳಮಹಡಿ ಒಳಗೊಂಡ ಬ್ಲಾಕ್-1 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 112 ವಸತಿ ಘಟಕಗಳು, ಬ್ಲಾಕ್-2 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 64 ವಸತಿ ಘಟಕಗಳು, ಬ್ಲಾಕ್-3 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 144 ವಸತಿ ಘಟಕಗಳು, ಬ್ಲಾಕ್-4 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು, ಬ್ಲಾಕ್-5 ರಲ್ಲಿ ನೆಲ+07ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 120 ವಸತಿ ಘಟಕಗಳು ಹಾಗೂ ಇಡಬ್ಲ್ಯೂಎಸ್ ಬ್ಲಾಕ್ ರಲ್ಲಿ ತಳ+ನೆಲ+07 ಮೇಲಂತಸ್ತು+ಟೆರೆಸ್ ಮಹಡಿಗಳಲ್ಲಿ 88 ವಸತಿ ಘಟಕಗಳು ಒಟ್ಟಾರೆ 616 ವಸತಿ ಘಟಕಗಳ ಬಹುಮಹಡಿ ವಸತಿ** ಕಟ್ಟಡಗಳಿಗೆ ಈ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು **ದಿನಾಂಕ: 25.11.2024** ರಂದು ನಕ್ಷೆ ಮಂಜೂರಾತಿ ನೀಡಲಾಗಿದೆ. ಈ ನಕ್ಷೆ ಮಂಜೂರಾತಿಯು **ದಿನಾಂಕ: 25.11.2024 ರಿಂದ ದಿನಾಂಕ: 24.11.2026** ರವರೆಗೆ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

## ಪಾಲಿಸಬೇಕಾದ ಷರತ್ತುಗಳು

1. ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹುಲಿಮಂಗಲ ಗ್ರಾಮದ ಸರ್ವೆ ನಂ.159/1 ರಲ್ಲಿ 4ಎ-16ಗುಂ, ಸರ್ವೆ ನಂ. 159/2ರಲ್ಲಿ 1ಎ-00ಗುಂ, ಸರ್ವೆ ನಂ.161ರಲ್ಲಿ 0ಎ-17ಗುಂ, ಸರ್ವೆ ನಂ.162ರಲ್ಲಿ 0ಎ-30ಗುಂ, ಸರ್ವೆ ನಂ.163/1ರಲ್ಲಿ 0ಎ-28ಗುಂ, ಸರ್ವೆ ನಂ.163/2 ರಲ್ಲಿ 1ಎ-39ಗುಂ, ಸರ್ವೆ ನಂ.178/1ರಲ್ಲಿ 0ಎ-11ಗುಂ, ಸರ್ವೆ ನಂ.178/3 ರಲ್ಲಿ 0ಎ-15ಗುಂ, ಸರ್ವೆ ನಂ.178/4 ರಲ್ಲಿ 0ಎ-15ಗುಂ ಒಟ್ಟು 10ಎ-11ಗುಂ ಪೈಕಿ 0ಎ-4.75ಗುಂ ಕಾಲುವೆ ಪಥ ಬದಲಾವಣೆಯಿಂದ ಹೆಚ್ಚುವರಿಯಾದ ಖರಾಬು ಹೊರತುಪಡಿಸಿ, ಉಳಿಕೆ 10ಎ-6.25ಗುಂ ವಿಸ್ತೀರ್ಣದ ವಸತಿ ಅಭಿವೃದ್ಧಿ ಯೋಜನಾ ಕಟ್ಟಡದ ನಕ್ಷೆಗೆ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ವಿಷಯ ಠರಾವು ಸಂಖ್ಯೆ. 1.4.11/2024, ದಿನಾಂಕ:25.01.2024 ರಲ್ಲಿ ಅನುಮೋದಿಸಲಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ.ಬೆಂಅಪ್ರಾ/ನಯೋಸ/DLP-38/23-24/82/2024-25, ದಿನಾಂಕ:16.04.2024 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
2. ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಯಾವ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ಸಿ.ಎ., ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.
3. ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರು ಬಿಡಿಎ/ಬಿಬಿಎಂಪಿಗೆ/ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟ ಶುಲ್ಕಗಳನ್ನು ಪಾವತಿಸುವುದು.
4. ಕಾಮಗಾರಿ ಪ್ರಾರಂಭಿಸುವುದಕ್ಕಿಂತ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಖಾತಾ ಪತ್ರ ಪಡೆಯುವುದು.
5. ಕಟ್ಟಡ ಕೆಲಸ ಪ್ರಾರಂಭಿಸುವ ಮುನ್ನ ಕಾರ್ಮಿಕರಿಗೆ ತಾತ್ಕಾಲಿಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸುವುದು ಮತ್ತು ನಿರ್ವಹಿಸಿ ಶುಚಿತ್ವವನ್ನು ಕಾಪಾಡುವುದು.

**ಆಯುಕ್ತರ ಪರವಾಗಿ**
**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
**ಬೆಂಗಳೂರು**

6. ಪ್ರಾಧಿಕಾರದಿಂದ ಮಂಜೂರಾದ ಕಟ್ಟಡ ನಕ್ಷೆಯಂತೆಯೇ ಉದ್ದೇಶಿತ ಕಟ್ಟಡಕ್ಕೆ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಕಟ್ಟಡ ನಿರ್ಮಾಣನನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ತಪ್ಪಿದಲ್ಲಿ ಮಂಜೂರಾದ ನಕ್ಷೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು

7. ಕಟ್ಟಡ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದು, ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಮಂಜೂರಾದ ಕಟ್ಟಡ ನಕ್ಷೆಯು ತನ್ನಿಂತಾನೆ ರದ್ದಾಗುತ್ತದೆ ಹಾಗೂ ಕಾನೂನು ರೀತ್ಯಾ ಸೂಕ್ತ ಕ್ರಮ ಜರುಗಿಸಲಾಗುವುದು.

8. ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ಹಾಗೂ Buffer ಪ್ರದೇಶದಲ್ಲಿ ವಿವಿಧ ಜಾತಿಯ ಮರಗಿಡಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು, ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು.

9. ಪ್ರಾಧಿಕಾರವು ಅನುಮೋದಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆ ಮಾಡುವಂತಿಲ್ಲ.

10. ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶವು ಸೇರಿದಂತೆ ಅಭಿವೃದ್ಧಿ ಯೋಜನಾ ಪ್ರದೇಶದಲ್ಲಿ 240.00 ಚ.ಮೀ FAR ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು.

11. ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಸಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

12. ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಹಾಗೂ ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅರ್ಜಿದಾರರದ್ದೇ ಆಗಿರುತ್ತದೆ.

13. ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕ್ಕೆಗೊಳ್ಳಲಾಗುವುದು.

14. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿಯ ಅಗತ್ಯತೆ ಬಗ್ಗೆ Water Table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.

15. ವಸತಿ ಕಟ್ಟಡ ನಕ್ಷೆಯಲ್ಲಿ Sewage Treatement Plant, Solid Waste Management, RWH, Transformer Yard ಗೆ ಅಗತ್ಯ ಜಾಗಗಳನ್ನು ಗುರುತಿಸಿ, Dual Piping System ಅನ್ನು ಅಳವಡಿಸಿ KSPCB, BWSSB, BESCOM ರವರ ನಿರ್ದೇಶನದಂತೆ ಅಳವಡಿಸುವುದು.

16. ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಮತ್ತು ಇತರೆ ಉಪಯೋಗಗಳಿಗೆ Dual Piping System ಅನ್ನು BWSSB ರವರ ನಿರ್ದೇಶನದಂತೆ ಅಳವಡಿಸುವುದು.

17. ವಸತಿ ಕಟ್ಟಡ ನಕ್ಷೆಯಂತೆಯೇ, ಘನ ತ್ಯಾಜ್ಯಗಳನ್ನು ಹಸಿ ತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

18. ಸ್ವಾಭಾವಿಕವಾಗಿ ಹರಿದು ಹೋಗುವ ಮಳೆ ನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

19. ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುದೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ಸಿದ್ಧಪಡಿಸಿ ವಿನ್ಯಾಸದಂತೆ ಕಾರ್ಯ ನಿರ್ವಹಿಸುವುದು.
20. ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸುವುದು.
21. ಕಟ್ಟಡದಲ್ಲಿ ಸೋಲಾರ್ ಲೈಟಿಂಗ್ ಮತ್ತು ಸೋಲಾರ್ ವಾಟರ್ ಹೀಟಿಂಗ್ ವ್ಯವಸ್ಥೆಯನ್ನು ಅಳವಡಿಸತಕ್ಕದ್ದು. ಪ್ರಸ್ತಾಪಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಭೂಮಿಯ ಒಳಗಡೆ ಎಲೆಕ್ಟ್ರಿಕಲ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು.
22. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಮತ್ತು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಅಂಶಗಳಿಗೆ ಮತ್ತು ವಿವಿಧ ಇಲಾಖೆಗಳ ನಿರಾಕ್ಷೇಪಣಾ ಪತ್ರಗಳಲ್ಲಿನ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
23. ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು.
24. ಕಟ್ಟಡದ ನಿರ್ಮಾಣ ವೆಚ್ಚವು ಪ್ರತೀ ಚದರ ಅಡಿಗೆ 650/-ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ 1% ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.
25. ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು (Gram Panchayath) ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.
26. ಪೂರ್ಣಗೊಂಡ ಕಟ್ಟಡವನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
27. ಅರ್ಜಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ (BWSSB & DB) ನಿಗಧಿಪಡಿಸಿದ ಹಣವನ್ನು ಸಂದಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು
28. ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು ರವರ ದಿನಾಂಕ: 04-03-2006 ರಂದು ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಭದ್ಧರಾಗಿರತಕ್ಕದ್ದು.
29. ಅಭಿವೃದ್ಧಿದಾರರು ಯೋಜನೆಯ ಒಳಾಂಗಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
30. ಅಭಿವೃದ್ಧಿದಾರರು ಬೆಟರ್ ಮೆಂಟ್ ತೆರಿಗೆ ಪಾವತಿಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ನೀಡುವ 45727-45730/2011(ಬೆಂಅಪ್ರಾ), ದಿನಾಂಕ: 03.09.2012ರ ತೀರ್ಮಾನದ ವಿರುದ್ಧ ಪ್ರಾಧಿಕಾರವು ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಿದ್ದು, ಮೇಲ್ಮನವಿಯ ಕುರಿತು ನ್ಯಾಯಾಲಯ ನೀಡುವ ತೀರ್ಪಿಗೆ ಬದ್ದರಾಗಿರಲು ಷರತ್ತಿಗೆ ಒಳಪಡಿಸಲಾಗಿದೆ.
31. ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರ ಕಾರಣಗಳಿಂದ ಏನಾದರೂ ಅನಾಹುತ ವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ.
32. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು (NGT) ಆಗಿಂದಾಗ್ಗೆ ಹೊರಡಿಸುವ ಯಾವುದೇ ಮಾರ್ಗಸೂಚಿ / ನಿರ್ದೇಶನಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.
33. ಸಿವಿಲ್ ಕಾಮಗಾರಿ ಕೆಲಸಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ಅರ್ಜಿದಾರರೇ ಕಾರ್ಯಗತ ಮಾಡತಕ್ಕದ್ದು.
34. ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ R.S ನಕ್ಷೆ ಅಥವಾ RMP ರಂತೆ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿವಿಕೆಗೆ ಅಡಚಣೆ ಉಂಟು ಮಾಡದೇ ಸರಾಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

35. ಗೌರವಾನ್ವಿತ ರಾಷ್ಟ್ರೀಯ ಹಸಿರು ನ್ಯಾಯಪೀಠ ರವರ ಪತ್ರ ಸಂಖ್ಯೆ: PCB/031/C&D/2016/5392/2020-21 ದಿನಾಂಕ: 25.02.2021 ರಂತೆ Construction and Demolition (C & D) ಕಸವನ್ನು ವಿಲೆ ಮಾಡುವ ಬಗ್ಗೆ ನಿರ್ವಹಣೆ ಯೋಜನೆಯನ್ನು ULB (Urban Locai Body) ರವರಿಗೆ ಸಲ್ಲಿಸಿ ಅನುಮೋದನೆ ಪಡೆದು ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡುವ ಮುನ್ನ ಸಲ್ಲಿಸುವುದು.

36. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

ಆಯುಕ್ತರ ಪರವಾಗಿ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು :–

ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ, ಬೆಂ.ಅ.ಪ್ರಾ., ಬಿಡಿಎ ವಾಣಿಜ್ಯ ಸಂಕೀರ್ಣ, ಬನಶಂಕರಿ 2ನೇ ಹಂತ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.